4683 (5253) ಶ್ರೀ ರಾಮರೆಡ್ಡಿ ಜಿ.ವಿ (ಬಾಗೇಪಲ್ಲಿ) :– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನೆ ಮಾಡುತ್ತಿರುವ ಸಕ್ಕರೆ ಪ್ರಮಾಣವೆಷ್ಟು;

2) ಇದು ರಾಜ್ಯದ ಅಗತ್ಯತೆಗಿಂತ ಹೆಚ್ಚಿದೆಯೆ ಅಥವಾ ಕಡಿಮೆ ಇದೆಯೇ?

ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು) :

1) 2004–05ನೇ ಸಾಲಿನಲ್ಲಿ ಇದುವರೆಗೆ 9.91 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆ. ಹಿಂದಿನ ವರ್ಷದ ದಾಸ್ತಾನು 5.45 ಲಕ್ಷ ಟನ್ ಸೇರಿ ಒಟ್ಟು 15.36 ಲಕ್ಷ ಟನ್ ಹಾಲಿ ವರ್ಷಕ್ಕೆ ಲಭ್ಯವಿದೆ.

2) ರಾಜ್ಯದಲ್ಲಿ ಸಕ್ಕರೆಯ ವಾರ್ಷಿಕ ಬಳಕೆಯು ಸುಮಾರು 13.00 ಲಕ್ಷ ಟನ್ ಇದೆ. ಆದ್ದರಿಂದ ಹಾಲಿ ಲಭ್ಯವಿರುವ 15.36 ಲಕ್ಷ ಟನ್ ಸಕ್ಕರೆಯು ರಾಜ್ಯದ ಅಗತ್ಯತೆಗೆ ಸಾಕಾಗಲಿದೆ.

4684 (5254) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಾಗತೀಕರಣದ ನೀತಿಗಳಿಂದಾಗಿ ರಾಜ್ಯದ ನೇಕಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಡ ನೇಕಾರರ ಅಭ್ಯುದಯಕ್ಕಾಗಿ ಯಾವ ಕ್ರಮ ಕೈಗೊಂಡಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಹೌದು. ನೇಕಾರರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕೈಮಗ್ಗ ಹಾಗೂ ವಿದ್ಯುತ್‌ಮಗ್ಗ ಕೈಗಾರಿಕೆಗಳ ಅಭಿವೃದ್ಧಿಗೆ ಹಾಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಜೊತೆಗೆ, ರಾಜ್ಯ ಸರ್ಕಾರವು 2004–05ನೇ ಸಾಲಿಗೆ ನೇಕಾರರ ವಿಶೇಷ ಪ್ಯಾಕೇಜನ್ನು ಘೋಷಿಸಿದ್ದು, ಈ ಕೆಳಕಂಡ ಯೋಜನೆಗಳನ್ನು ಒಳಗೊಂಡಿದೆ.

- ವಿದ್ಯುತ್‌ಮಗ್ಗ ನೇಕಾರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು (ರೂ.1.25–10 ಹೆಚ್‌ಪಿವರೆಗೆ ಮತ್ತು 10 ಮಗ್ಗಗಳಿಗಿಂತ ಕಡಿಮೆ)
- ಯಶಸ್ವಿನಿ ಯೋಜನೆಯಡಿ ನೇಕಾರರಿಗೆ ಆರೋಗ್ಯ ವಿಮೆ.